# ಕೃಷಿ ವಿಶ್ವವಿದ್ಯಾಲಯ ಧಾರವಾಡ ವತಿಯಿಂದ 2018–19 ನೇ ಸಾಲಿನಲ್ಲಿ ತಾಲೂಕು ಮಟ್ಟದ ಶ್ರೇಷ್ಠ ಯುವ ಕೃಷಿ ಮಹಿಳೆ ಪ್ರಶಸ್ತಿಗೆ ಭಾಜನರಾದ ಯುವ ರೈತರ ಸಾಧನೆಗಳು

# ರೇಷ್ಮೆ ಕೃಷಿಯ ಕೈಹಿಡಿದ ಯುವ ಮಹಿಳೆ ರೇಖಾ ರಾಮು ಗೌಡ

## ತಾಲೂಕು : ಸಿದ್ದಾಪುರ



**ಹೆಸರು : ರೇಖಾ ರಾಮು ಗೌಡ**
**ಊರು : ಗೊಣವತ್ತಿ**
**ತಾಲೂಕ: ಸಿದ್ದಾಪುರ**
**ಜಿಲ್ಲೆ : ಉತ್ತರ ಕನ್ನಡ**
**ವಯಸ್ಸು :** **ವಿದ್ಯಾಭ್ಯಾಸ:** **ಲಿಂಗ : ಹೆಣ್ಣು**
**ದೂ.ಸಂ: 9482418521**

## ವಿಶೇಷ ಸಾಧನೆಗಳು :

- ತಮ್ಮ 30 ಗುಂಟೆ ಜಾಗದಲ್ಲಿ ಹಿಪ್ಪು ನೇರಳೆ ಬೆಳೆದು ರೇಷ್ಮೆ ಸಾಕಣಿಕೆ ಮಾಡಿತ್ತಿರುವ ಇವರು ಸಿದ್ದಾಪುರ ತಾಲೂಕಿನ ಸಾಕಷ್ಟು ರೈತರಿಗೆ ರೇಷ್ಮೆ ಕೃಷಿ ಮಾಡಲು ಸ್ಪೂರ್ತಿಯಾಗಿದ್ದಾರೆ.
- ರೇಷ್ಮೆಯನ್ನು ಮಾರಾಟ ಮಾಡಲು ಸ್ಥಳಿಯ ಮಾರುಕಟ್ಟೆಯಲ್ಲದೇ ತುಮಕೂರು ಹಾಗೂ ಹಾಸನದಂತಹ ರೇಷ್ಮೆ ಗೂಡಿನ ಮಾರುಕಟ್ಟೆಯನ್ನು ತಲಪುತ್ತಿದ್ದಾರೆ.
- ಅಂತರಬೆಳೆ ಮತ್ತು ಮಿಶ್ರ ಬೆಳೆ ಪದ್ದತಿಯಲ್ಲಿ ಅಡಿಕೆ, ಕಾಳುಮೆಣಸು, ತೆಂಗು ಮತ್ತು ಬಾಳೆ ಕೃಷಿಯನ್ನು ಮಾಡುತ್ತಿದ್ದಾರೆ.
- ಸದಾ ನೀರು ನಿಂತು ಹೆಚ್ಚು ತೇವಾಂಶ ಹೊಂದಿರುವ ಭೂಮಿಯನ್ನು ಸಹ ಸಾಗುವಳಿಗೆ ಬಳಸಿಕೊಂಡು ವರ್ಷ ಪೂರ್ತಿ ಹೈಬ್ರಿಡ್ ಭತ್ತದ ಕೃಷಿಯಲ್ಲಿ ತೊಡಗಿಕೊಂಡಿದ್ದಾರೆ.
- ರೇಷ್ಮೆ, ತೋಟಗಾರಿಕೆ, ಕೃಷಿಕ ಬೆಳೆಗಳ ಜೊತೆಗೆ ಹೈನುಗಾರಿಕೆಯನ್ನು ಮಾಡುತ್ತಿರುವ ಇವರು ಸ್ವದೇಶಿ ಆಕಳು ಮತ್ತು ಎಮ್ಮೆಗಳನ್ನು ಸಾಕುತ್ತಿದ್ದಾರೆ. ತಮ್ಮಲ್ಲಿ ಉತ್ಪಾದನೆಯಾಗುವ ಹಾಲನ್ನು ಸಂಸ್ಕರಣೆಗೆ ಒಳಪಡಿಸಿ ತುಪ್ಪ ತಯಾರಿಸಿ ಮಾರಾಟ ಮಾಡುವುದರ ಜೊತೆಗೆ, ತಮ್ಮ ಊರಿನಲ್ಲಿ ಹಾಲನ್ನು ಮಾರಲು ಡೇರಿ ತೆರೆಯಲು ಕೆ.ಎಂ.ಎಫ್ ರವರಿಗೆ ಮನವಿ ಮಾಡುತ್ತಿದ್ದಾರೆ.







# ಯುವ ಕೃಷಿ ಮಹಿಳೆ ರೂಪಾ ಗಣಪತಿ ಗೌಡ

## ತಾಲೂಕು : ಶಿರಸಿ



**ಹೆಸರು : ರೂಪ ಗಣಪತಿ ಗೌಡ**
**ಊರು : ಅಂಡಗಿ**
**ತಾಲೂಕ: ಶಿರಸಿ**
**ಜಿಲ್ಲೆ : ಉತ್ತರ ಕನ್ನಡ**
**ವಯಸ್ಸು :35 ವಿದ್ಯಾಭ್ಯಾಸ: II ಪಿ.ಯು.ಸಿ ಲಿಂಗ : ಹೆಣ್ಣು**
**ದೂ.ಸಂ: 9902853094**

## ವಿಶೇಷ ಸಾಧನೆಗಳು :

- ರೂಪಾ ಗಣಪತಿ ಗೌಡ ಇವರು ದ್ವಿತೀಯ ಪಿ.ಯು.ಸಿ ವಿದ್ಯಾಭ್ಯಾಸ ಪೋರೈಸಿ ಸಂಸಾರದ ಜವಾಬ್ದಾರಿಗಳನ್ನೆಲ್ಲ ನಿಭಾಯಿಸುತ್ತ, ಕೃಷಿಯಲ್ಲಿ ತಮ್ಮ ಪತಿಗೆ ಸರಿಸಮನಾಗಿ ಹೆಗಲು ಕೊಟ್ಟು ಕಾರ್ಯನಿರ್ವಹಿಸುತ್ತಾರೆ.
- ತಮ್ಮ 4.5 ಎಕರೆ ಜಮೀನಿನಲ್ಲಿ ಭತ್ತ, ಶೇಂಗಾ, ಮುಸುಕಿನ ಜೋಳ, ಅನಾನಸ್, ಬಾಳೆ, ಅಡಿಕೆ, ತೆಂಗು, ಶುಂಠಿ ಬೆಳೆಗಳನ್ನು ಯಶಸ್ವಿಯಾಗಿ ಬೆಳೆಯುತ್ತಿದ್ದಾರೆ.
- ಮೆಣಸಿನ ಕಾಯಿ, ಟಮಟೋ, ಬೀನ್ಸ, ಸವತೆಕಾಯಿ, ಡೇರೆ ಹೂವು ಇತ್ಯಾದಿಗಳನ್ನು ಶುಂಠಿಯೊಂದಿಗೆ ಮಿಶ್ರ ಬೆಳೆ ಪದ್ದತಿಯಲ್ಲಿ ಬೆಳೆದು ಹೆಚ್ಚಿನ ಆದಾಯ ಪಡೆಯುತ್ತಾರೆ.
- ಶುಂಠಿ ಹಾಗೂ ಅಡಿಕೆ ಕೃಷಿಗಳಲ್ಲಿ ಹೊಸ ತಂತ್ರಜ್ಞಾನಗಳನ್ನು ಅಳವಡಿಸಿಕೊಂಡು ಉತ್ತಮ ಇಳುವರಿ ಪಡೆದಯುತ್ತಿದ್ದಾರೆ.
- 12 ಜೇನುಪೆಟ್ಟಿಗೆಗಳನ್ನು ಮನೆ, ಗದ್ದೆ ಹಾಗೂ ತೋಟಗಳಲ್ಲಿ ಇಟ್ಟು ಜೇನು ಕೃಷಿಯಲ್ಲೂ ತಮ್ಮನ್ನು ಪಳಗಿಸಿಕೊಂಡಿದ್ದಾರೆ.
- ತೋಟಗಾರಿಕೆ, ಕೃಷಿಕ ಬೆಳೆಗಳ ಜೊತೆಗೆ ಹೈನುಗಾರಿಕೆಯನ್ನು ಮಾಡುತ್ತಿರುವ ಇವರು 01 ಸ್ವದೇಶಿ ಆಕಳು ಸಾಕುತ್ತಿದ್ದಾರೆ. ತಮ್ಮಲ್ಲಿ ಉತ್ಪಾದನೆಯಾಗುವ ಹಾಲನ್ನು ಸಂಸ್ಕರಣೆಗೆ ಒಳಪಡಿಸಿ ತುಪ್ಪ ತಯಾರಿಸಿ ಮಾರಾಟ ಮಾಡುತ್ತಾರೆ.





# ಕಾಳಿ ಮಡಿಲಲ್ಲಿ ಯುವ ಕೃಷಿ ಮಹಿಳೆ  ಸಂಧ್ಯಾ ಸುದಾಮ ದಾನಗೇರಿ

## ತಾಲೂಕು : ಜೋಯಿಡಾ



**ಹೆಸರು : ಸಂಧ್ಯಾ ಸುದಾಮ ದಾನಗೇರಿ**
**ಊರು : ಮರಡಾ, ಗುಂದ**
**ತಾಲೂಕ: ಜೋಯಿಡಾ**
**ಜಿಲ್ಲೆ : ಉತ್ತರ ಕನ್ನಡ**
**ವಯಸ್ಸು :  ವಿದ್ಯಾಭ್ಯಾಸ:  ಲಿಂಗ : ಹೆಣ್ಣು**
**ದೂ.ಸಂ: 8277372095, 9449589303**

## ವಿಶೇಷ ಸಾಧನೆಗಳು :

- ಅನ್ನದಾತನ ದ್ಯೇಯವನ್ನು ಶ್ರದ್ದೆಯಿಂದ ಪಾಲಿಸುವ ಇವರು ವಿಷಮುಕ್ತ ಕೃಷಿ ಉತ್ಪನ್ನಗಳನ್ನು ಸಂಪೂರ್ಣ ಸಾವಯವ ಹಾಗೂ ಪರಿಸರ ಸ್ನೇಹಿ ಪದ್ದತಿಯಲ್ಲಿ ಅಧಿಕ ಇಳುವರಿ ಮತ್ತು ಲಾಭವನ್ನು ಗಳಿಸುತ್ತಿರುತ್ತಾರೆ.
- ಇವರು ತಮ್ಮ ಅಡಿಕೆ ಹಾಗೂ ತೆಂಗು ತೋಟದಲ್ಲಿ ವಿಳ್ಯೆದೆಲೆ, ವೆನಿಲ್ಲಾ, ಕಾಳುಮೆಣಸು, ಏಲಕ್ಕಿ, ಬಾಳೆಯನ್ನು ಮಿಶ್ರ ಬೆಳೆಯಾಗಿ ಮತ್ತು ಮಲೆನಾಡಿನ ಬೆಳೆಗಳಾದ ಜಾಯಿಕಾಯಿ, ಕೋಕೋ, ಏಲಕ್ಕಿ, ಲವಂಗಗಳನ್ನು ಅಂತರ ಬೆಳೆಗಳಾಗಿ ಅಳವಡಿಸಿ ಕಡಿಮೆ ಪ್ರದೇಶದಲ್ಲಿ ಬಹುಬೆಳೆಗಳಾದ ಅಧಿಕ ಇಳುವರಿ ಹಾಗೂ ಲಾಭವನ್ನು ಗಳಿಸುತ್ತಿರುತ್ತಾರೆ.
- ಇವರು ತಮ್ಮ ತೋಟದ ಬದುಗಳಲ್ಲಿ ಹಾಗೂ ಅಂಚಿನಲ್ಲಿ ಸುಗಂಧ ದ್ರವ್ಯ ಮರಗಳಾದ ಶ್ರೀಗಂಧ ಮತ್ತು ಅಗರ್‌ವುಡ್ ಮರಗಳನ್ನು ಬೆಳೆದು ಇತರರಿಗೆ ಮಾದರಿಯಾಗಿದ್ದಾರೆ. ಉಪಕಸುಬಾಗಿ ಹೈನುಗಾರಿಕೆಯಿಂದ ಉತ್ತಮ ಗುನಮಟ್ಟದ ಹಾಲಿನ ಉತ್ಪಾದನೆಯಿಂದ ಸಹ ಹೆಚ್ಚು ಲಾಭ ಗಳಿಸುತ್ತಿರುತ್ತಾರೆ.
- ಸ್ವತಹ: ತಯಾರಿಸಿದ ಕಾಂಪೋಸ್ಟ್, ಎರೆಹುಳುಗೊಬ್ಬರ,ಬಯೊಡೈಜಸ್ಟ, ಬೇವಿನಹಿಂಡಿ ಹಾಗೂ ಜೈವಿಕ ಗೊಬ್ಬರಗಳು (ರೈಜೋಬಿಯಂ,ಟ್ರೈಕೋಡೆರ್ಮ ಇತ್ಯಾದಿ) ಬಳಕೆಯಿಂದ ಆರೋಗ್ಯವಂತ ಕೃಷಿಯಲ್ಲಿ ತೊಡಗಿದ್ದಾರೆ.
- ಸ್ವತಹ: ತಮ್ಮ ನರ್ಸರಿಯಲ್ಲಿ ಕಾಳುಮೆಣಸು, ವೆನಿಲ್ಲಾ, ಎಲೆಬಳ್ಳಿ ಸಸಿಗಳನ್ನು ಬೆಳೆಸಿ ರೋಗರಹಿತ ತೋಟಗಾರಿಕೆಗೆ ನಾಂದಿಯಾಗಿದ್ದಾರೆ.
- ಇವರ ತೋಟದಲ್ಲಿ ಕುಜ್ಜ ಅಡಿಕೆ ಮರಗಳು ಆಕರ್ಷಣೀಯಿಳುವರಿ ನೀಡುತ್ತಿವೆ. ಇವರು ಪ್ರಮುಖವಾಗಿ ತೋಟಗಾರಿಕ ಬೆಳೆಗಳು ಹಾಗೂ ಹೈನುಗಾರಿಕೆಯಿಂದ 2,220,000 ನಿವ್ವಳ ಲಾಭ ಪಡೆಯತ್ತಿರುತ್ತಾರೆ.
- ಇವರು ಕಾಂಕ್ರೀಟ್ ಕಾಡಿನಿಂದ ಕಾಳಿನಾಡಿಗೆ ಮರಳಿ ಸಾವಯವ ಕೃಷಿಯಲ್ಲಿ ತೊಡಗಿಸಿಕೊಂಡು ಉತ್ತಮ ಉತ್ಪಾದನೆಯಿಂದ ಈ ಭಾಗದ ರೈತರನ್ನು ಸ್ವಾಭಾವಿಕ ಕೃಷಿಯತ್ತ ಸೆಳೆದಿದ್ದಾರೆ.








# ಯುವ ಕೃಷಿ ಮಹಿಳೆ ಲಕ್ಷ್ಮೀ ಪರಶುರಾಮ ಹರಿಜನ

## ತಾಲೂಕು : ಹಳಿಯಾಳ



**ಹೆಸರು : ಲಕ್ಷ್ಮೀ ಪರಶುರಾಮ ಹರಿಜನ**
**ಊರು : ಅಲೂರ**
**ತಾಲೂಕ: ಹಳಿಯಾಳ**
**ಜಿಲ್ಲೆ : ಉತ್ತರ ಕನ್ನಡ**
**ವಯಸ್ಸು :** **ವಿದ್ಯಾಭ್ಯಾಸ:** **ಲಿಂಗ : ಹೆಣ್ಣು**

**ದೂ.ಸಂ: 9902112472**

## ವಿಶೇಷ ಸಾಧನೆಗಳು :

- ಇವರು ಕಳೆದ 5 ವರ್ಷಗಳಿಂದ ಮರ ಪದ್ದತಿಯಲ್ಲಿ ಉತ್ಕೃಷ್ಠ ರೇಷ್ಮೆ ಬೆಳೆದು ಅಧಿಕ ಲಾಭ ಗಳಿಸುತ್ತಿದ್ದಾರೆ.
- ಇವರು ತಮ್ಮ ಜಮೀನಿನ ಸುತ್ತ ಜೈವಿಕ ಬದುಗಳ ನಿರ್ಮಾಣ ಮಡಿ ನೀರಿನ ಸಂರಕ್ಷಣೆಯಲ್ಲಿ ತೊಡಗಿರುತ್ತಾರೆ.
- ಬೆಳೆ ಪದ್ಧತಿಗಳಲ್ಲಿ ಮುಖ್ಯವಾಗಿ ರೇಷ್ಮೆಯನ್ನು ಏಕ ಬೆಳೆಯಾಗಿ ಹಾಗೂ ಗೋಡಂಬಿ, ತೆಂಗು, ಬಾಳೆ ಬೆಳೆಗಳನ್ನು ಅಂತರ ಬೆಳೆಯಾಗಿ ಬೆಳೆದು ಸೆಣಬು ಮತ್ತು ರೇಷ್ಮೆಯನ್ನು ಮಿಶ್ರ ಬೆಳೆಯಾಗಿ ಬೆಳೆಯುತ್ತಿದ್ದಾರೆ.
- ರೇಷ್ಮೆಯಲ್ಲಿ ಮುಖ್ಯವಾಗಿ ಮರ ಪದ್ಧತಿಯಲ್ಲಿ ಬೇಸಾಯ ಮಾಡುತ್ತಿದ್ದು ಜೊತೆಗೆ ಉಪ ಕಸುಬುಗಳಾದ ಹೈನುಗಾರಿಕೆಯಲ್ಲಿ ಹಾಗೂ ಕೋಳಿ ಸಾಕಾಣಿಕೆಯಲ್ಲಿ ತೊಡಗಿದ್ದಾರೆ.
- ಭೂಮಿಯ ಫಲವತ್ತತೆಯನ್ನು ಕಾಪಾಡಲು ಇವರು ಹಸಿರತಿ ಗೊಬ್ಬರಗಳಿಂದ ಡಯಂಚ್ ಸೆಣಬು, ಗೊಬ್ಬರದ ಗಿಡಗಳನ್ನು ಬೆಳೆಸುತ್ತಾರೆ.
- ಇವರಿಗೆ ಯಂತ್ರೋಪಕರಣಗಳಾದ ಟ್ರಾಕ್ಟರ್, ಸಿಂಪರಕಗಳು,ವಿಡರ್, ಮೇವು ಕತ್ತರಿಸುವ ಯಂತ್ರಗಳು, ಪವರ್ ವೀಡರ್, ಟ್ರೆಸ್‌ಗಳ ಬಳಕೆಯ ಜ್ಞಾನ ಹೊಂದಿರುತ್ತಾರೆ.
- ಇವರ ಆದಾಯ ಮುಖ್ಯವಾಗಿ ಮರಕೃಷಿ ರೇಷ್ಮೆ ಪದ್ದತಿಯಲ್ಲಿ 1.2 ಹೆ.ನಲ್ಲಿ 12 ಕ್ವಿಂಟಾಲ್ ಕಕೂಂನ್‌ಗಳನ್ನು ಉತ್ಪಾದಿಸಿ ಒಟ್ಟು 6 ಲಕ್ಷ ಆದಾಯ ಪಡೆದಿರುತ್ತಾರೆ.
- ತೋಟಗಾರಿಕೆಯಲ್ಲಿ ಅಧಿಕ ಸಾಂದ್ರತೆಯಲ್ಲಿ ಬೆಳೆಯಾದ (0.8ಹೆ) ನಲ್ಲಿ ಒಟ್ಟು ನಿವ್ವಳ ಆದಾಯ ರೂ.75 ಸಾವಿರ ಪಡೆದಿರುತ್ತಾರೆ.
- ಗಮನೀಯವೆಂದರೆ ರೇಷ್ಮೆಯಲ್ಲಿ ಮರಕೃಷಿ ಪದ್ಧತಿಯಲ್ಲಿ 7 * 5 ಅಡಿ ಅಂತರದಲ್ಲಿ ನೆಡುವುದರಿಂದ ಅಧಿಕ ಇಳುವರಿಯನ್ನು ಪಡೆಯಬಹುದು. ಎಂದು ಸಾಬೀತು ಪಡಿಸುತ್ತಾರೆ.

# ಯುವ ಕೃಷಿ ಮಹಿಳೆಯರ ಸ್ಪೂರ್ತಿ  ಶೈಲಜಾ ಗಡಿಗ್ಯಪ್ಪಾ ಇಂಗಳಕಿ

**ತಾಲೂಕು : ಮುಂಡಗೋಡ**

**ಹೆಸರು : ಶೈಲಜಾ ಗಡಿಗ್ಯಪ್ಪಾ ಇಂಗಳಕಿ**
**ಊರು : ಪಾಳಾ**
**ತಾಲೂಕ: ಮುಂಡಗೋಡ**
**ಜಿಲ್ಲೆ : ಉತ್ತರ ಕನ್ನಡ**
**ವಯಸ್ಸು : 32 ವಿದ್ಯಾಭ್ಯಾಸ: ಲಿಂಗ : ಹೆಣ್ಣು**
**ದೂ.ಸಂ: 8277647474**

## ವಿಶೇಷ ಸಾಧನೆಗಳು :

- ಸಂಪೂರ್ಣವಾಗಿ ಕೃಷಿಯಲ್ಲಿ ತೊಡಗಿಕೊಂಡು ಲಾಬದಾಯಕ ಕೃಷಿಯನ್ನು ಮಾಡುತ್ತ ಸ್ವಾವಲಂಬಿ ಜೀವನವನ್ನು ನಡೆಸುತ್ತಿದ್ದಾರೆ.
- ಹಲವಾರು ತರಕಾರಿಗಳಾದ ಸೌತೆಕಾಯಿ, ಹೀರೆಕಾಯಿ, ಮೆಣಸಿನಕಾಯಿ, ಚವಳೆಕಾಯಿ, ಟೊಮೆಟೊಗಳನ್ನು ವೈಜ್ಞಾನಿಕವಾಗಿ ಬೆಳೆದು ಲಾಭವನ್ನು ಪಡೆಯುತ್ತಿದ್ದಾರೆ.
- ಹಿಟ್ಟಿನ ಗಿರಣಿಯನ್ನು ಹಾಕಿಕೊಂಡು ಪೂರಕ ಲಾಭವನ್ನು ಸಹ ಪಡೆಯುತ್ತಿದ್ದಾರೆ.
- ಬಾಳೆಕಾಯಿಯ ಮೌಲ್ಯವರ್ಧನೆಯಾದ ಬಾಳೆಕಾಯಿ ಚಿಪ್ಸನ್ನು ಮಾಡಿ ಮಾರುತ್ತಿದ್ದಾರೆ.
- ಊರಿನ ಉಳಿದ ಮಹಿಳೆಯರಿಗೆ ಕೃಷಿ ಮಾಡಲು ಸ್ಪೂರ್ತಿಯಾಗಿದ್ದಾರೆ.

# ಕುಮಟಾದ ಯುವ ಕೃಷಿ ಮಹಿಳೆ ನೇತ್ರಾವತಿ ನಾಯ್ಕ
## ತಾಲೂಕು : ಕುಮಟಾ

**ಹೆಸರು :ನೇತ್ರಾವತಿ ಚಂದ್ರಶೇಖರ ನಾಯ್ಕ**
**ಊರು :ಬಡಾಳ(ಸೊಪ್ಪಿನಹೊಸಳ್ಳಿ)**
**ತಾಲೂಕ: ಕುಮಟಾ**
**ಜಿಲ್ಲೆ : ಉತ್ತರ ಕನ್ನಡ**
**ವಯಸ್ಸು : 34 ವಿದ್ಯಾಭ್ಯಾಸ: ಲಿಂಗ : ಹೆಣ್ಣು**
**ದೂ.ಸಂ: 9483154604**

## ವಿಶೇಷ ಸಾಧನೆಗಳು :

- ಪರಿಸರ ಸ್ನೇಹಿ ಸಾವಯವ ಕೃಷಿಯನ್ನೇ ಅಳವಡಿಸಿಕೊಂಡು ಸಮೃದ್ಧ ಹಾಗೂ ಸುಸ್ಥಿರ ಕೃಷಿಯಿಂದ ತೋಟಗಾರಿಕೆ ಹಾಗೂ ಹೈನುಗಾರಿಕೆಯಿಂದ ಅಧಿಕ ಇಳುವರಿ ಹಾಗೂ ಲಾಭವನ್ನು ಗಳಿಸುತ್ತಿರುತ್ತಾರೆ.
- ಇವರು ತಮ್ಮ ತೋಟದಲ್ಲಿ ಕೃಷಿ ಅರಣ್ಯ ಗಿಡಗಳಾದ ಹೊನ್ನೆ ಸಾಗವಾನಿ ನಂದಿ, ಅಚಿಟವಾಡ ಮುಂತಾದ ಗಿಡಗಳನ್ನು ಬೆಳೆಸಿ ಮಣ್ಣಿನ ಫಲವತ್ತತೆಯನ್ನು ಹೆಚ್ಚಿಸುತ್ತಿದ್ದಾರೆ.
- ಪಶು ಸಂಗೋಪನೆಯನ್ನು ಉಪಕಸುಬಾಗಿ ಅಳವಡಿಕೊಂಡು ಹಾಲು,ಕಾಂಪೋಸ್ಟ ಕೊಟ್ಟಿಗೆ ಗೊಬ್ಬರ ಉತ್ಪಾದನೆಯಿಂದ ಲಾಭ ಗಳಿಸುತ್ತಿದ್ದಾರೆ.
- ತಮ್ಮ ತೋಟದ ಮಣ್ಣಿನ ಫಲವತ್ತತೆ ಹೆಚ್ಚಿಸಲು ಕೊಟ್ಟಿಗೆ ಗೊಬ್ಬರ, ಹಾಗೂ ಗ್ಲಿರಿಸೀಡಿಯಾ ಇತ್ಯಾದಿ ಬೆಳೆಸಿ ಸಾವಯವ ಕೃಷಿಯಲ್ಲಿ ತೊಡಗಿದ್ದಾರೆ. ಜೈವಿಕ ಗೊಬ್ಬರಗಳಾದ ಪಿ.ಎಸ್.ಬಿ ನಂತಹ ಜೀವಾಣುಗಳ ಜೊತೆ ಬೆರೆಸಿ ಪರಿಸರ ಸ್ನೇಹಿ ಹಾಗೂ ಆರೋಗ್ಯವಂತ ಕೃಷಿಯಲ್ಲಿ ತೊಡಗಿದ್ದಾರೆ.
- ಭತ್ತದಲ್ಲಿ ಶ್ರೀ ಪದ್ದತಿಯನ್ನು ಅಳವಡಿಸಿಕೊಂಡು ಭತ್ತದಲ್ಲಿ ಹೆಚ್ಚಿನ ಇಳುವರಿಯನ್ನು ಪಡೆಯುತ್ತಿದ್ದಾರೆ.
- ಸದರಿಯವರು ತೋಟಗಾರಿಕೆ, ಸಾಂಬಾರು ಹಾಗೂ ಹೈನುಗಾರಿಕೆಯಿಂದ ಲಕ್ಷಾಂತರ ನಿವ್ವಳಲಾಭ ಪಡೆಯುತ್ತಿದ್ದಾರೆ.

## ಹೊನ್ನಾವರದ ಯುವ ಕೃಷಿ ಮಹಿಳೆ ವಿದ್ಯಾಶ್ರೀ ಅಶೋಕ ಕೊಡಿಯಾ
### ತಾಲೂಕು : ಹೊನ್ನಾವರ

**ಹೆಸರು :ವಿದ್ಯಾಶ್ರೀ ಅಶೋಕ ಕೊಡಿಯಾ**
**ಊರು :ಹಳದಿಪುರ**
**ತಾಲೂಕ: ಹೊನ್ನಾವರ**
**ಜಿಲ್ಲೆ : ಉತ್ತರ ಕನ್ನಡ**
**ವಯಸ್ಸು : 25 ವಿದ್ಯಾಭ್ಯಾಸ: ಬಿ.ಬಿ.ಎ ಲಿಂಗ : ಹೆಣ್ಣು**
**ದೂ.ಸಂ: 8861556548**

## ವಿಶೇಷ ಸಾಧನೆಗಳು :

- ತಮ್ಮ ಭೂಮಿಯ ಜೊತೆಗೆ ಗುತ್ತಿಗೆ ಆಧಾರದ ಮೇಲೆ ಬೇರಯವರ ಜಮೀನನ್ನು ಸಾಗುವಳಿ ಮಾಡುವ ಮೂಲಕ ಅನೇಕ ಯುವಕರಿಗೆ ಮಾದರಿಯಾಗಿದ್ದಾರೆ.
- ಅಂತರ ಬೆಳೆಯಾಗಿ ಅಲಸಂಧಿ, ಉದ್ದು, ಶೇಂಗಾ ಬೆಳೆಗಳನ್ನು ಬೆಳೆದು ಕೃಷಿ ಸಂಪನ್ಮೂಲಗಳನ್ನು ವ್ಯವಸ್ಥಿತವಾಗಿ ಉಪಯೋಗಿಸುತ್ತದ್ದಾರೆ.
- ಆಧುನಿಕ ಕೃಷಿ ಯಂತ್ರಗಳನ್ನು ಬಳಕೆ ಮಾಡಿ ಆಧುನಿಕ ಪದ್ದತಿಯಲ್ಲಿ ಕೃಷಿಯನ್ನು ಮಾಡುತ್ತಿದ್ದಾರೆ
- ಕೃಷಿಯ ಜೊತೆಯಲ್ಲಿ ಉಪ ಪದ್ದತಿಗಳಾದ ತೋಟಗಾರಿಕೆ ಹಾಗೂ ಹೈನುಗಾರಿಕೆಯನ್ನು ಅಳವಡಿಸಿಕೊಂಡು ಉತ್ತಮ ಆದಾಯವನ್ನು ಪಡೆಯುತ್ತಿದ್ದಾರೆ. ಮತ್ತು ಸುತ್ತಮುತ್ತಲಿನ ಯುವಕ ಹಾಗೂ ಯುವತಿಯರಿಗೆ ಮಾದರಿಯಾಗಿದ್ದಾರೆ.
- ವಿವಿಧ ಮೂಲಗಳಿಂದ ಕೃಷಿ ಮಾಹಿತಿಯನ್ನು ಪಡೆದು ತಮ್ಮ ಜಮೀನಿನಲ್ಲಿ ಅಳವಡಿಕೊಂಡು ಹೆಚ್ಚಿನ ಲಾಭವನ್ನು ಗಳಿಸುತ್ತಿದ್ದಾರೆ.

# ಕಾರವಾರದ ಯುವ ಕೃಷಿ ಮಹಿಳೆ ಸರೋಜಿನಿ ರಮೇಶ ಗೌಡ

## ತಾಲೂಕು : ಕಾರವಾರ

**ಹೆಸರು :ಸರೋಜಿನಿ ರಮೇಶ ಗೌಡ**
**ಊರು :ನಿವಳಿ**
**ತಾಲೂಕ: ಕಾರವಾರ**
**ಜಿಲ್ಲೆ : ಉತ್ತರ ಕನ್ನಡ**
**ವಯಸ್ಸು : 32 ವಿದ್ಯಾಭ್ಯಾಸ: ಪಿಯುಸಿ ಲಿಂಗ : ಹೆಣ್ಣು**
**ದೂ.ಸಂ: 9483491275**

## ವಿಶೇಷ ಸಾಧನೆಗಳು :

- ಪರಿಸರ ಸ್ನೇಹಿ ಸಾವಯವ ಕೃಷಿಯನ್ನೇ ಅಳವಡಿಸಿಕೊಂಡು ಸಮೃದ್ಧ ಹಾಗೂ ಸುಸ್ಥಿರ ಕೃಷಿಯಿಂದ ತೋಟಗಾರಿಕೆ ಹಾಗೂ ಹೈನುಗಾರಿಕೆಯಿಂದ ' ಅಧಿಕ ಇಳುವರಿ ಹಾಗೂ ಲಾಭವನ್ನು ಗಳಿಸುತ್ತಿರುತ್ತಾರೆ.
- ಅಂತರ ಬೆಳೆಯಾಗಿ ಶೇಂಗಾ, ಉದ್ದು, ಬಾಳೆಯನ್ನು ಬೆಳೆಯುತ್ತಿದ್ದಾರೆ.
- ಕೋಳಿ ಸಾಕಾಣಿಕೆಯನ್ನು ಪ್ರಾರಂಭಿಸಿ ಕಡಿಮೆ ಶ್ರಮ ಹಾಗೂ ಬಂಡವಾಳದಿಂದ ದುಡಿಮೆಯನ್ನು ಕಂಡುಕೊಂಡಿದ್ದಾರೆ.
- ಕೃಷಿಗಾಗಿ ಹನಿ ನೀರಾವರಿ, ಸಿಂಚನ ಹಾಗೂ ಬಸಿ ಕಾಲುವೆಗಳನ್ನು ಉಪಯೋಗಿಸಿಕೊಂಡು ಸಮೃದ್ಧ ನೀರಿನ ನಿರ್ವಹಣೆ ಮಾಡುತ್ತಿದ್ದಾರೆ.
- ಭತ್ತದಲ್ಲಿ ಕೈನಾಟಿ ಬದಲು ಯಂತ್ರನಾಟಿಯನ್ನು ಬಳಸಿಕೊಂಡು ಕಡಿಮೆ ಖರ್ಚು ಸಮಯ ಉಳಿತಾಯ ಮಾಡಿಕೊಂಡಿರುತ್ತಾರೆ. ಹಾಗೂ ಈ ತಾಂತ್ರಿಕತೆಯನ್ನು ಅಕ್ಕಪಕ್ಕ ಜನರು ಸಹ ಅಳವಡಿಕೊಳ್ಳಲು ನೆರವಾಗಿದ್ದಾರೆ.
- ಮಣ್ಣಿನ ಫಲವತ್ತತೆಯನ್ನು ಹಾಗೂ ಉತ್ಪಾದನೆಯನ್ನು ಹೆಚ್ಚಿಸಲು ಕೊಟ್ಟಿಗೆ ಗೊಬ್ಬರ ಎರೆಹುಳು ಗೊಬ್ಬರ ಹಾಗೂ ಜೈವಿಕ ಗೊಬ್ಬರಗಳ ಬಳಸುತ್ತಿದ್ದಾರೆ. ಹಾಗೂ ರೋಗಗಳ ನಿರ್ವಹಣೆಗಾಗಿ ಜೈವಿಕ ಪೀಡೆನಾಶಕಗಳನ್ನು ಉಪಯೋಗಿಸಿ ಪರಿಸರ ಸ್ನೇಹಿ ಹಾಗೂ ಆರೋಗ್ಯವಂತ ಕೃಷಿಯಲ್ಲಿ ತೊಡಗಿದ್ದಾರೆ.

# ಲೀಲಾವತಿ ಶಂಕರ ನಾಯ್ಕ
## ತಾಲೂಕು : ಭಟ್ಕಳ



**ಹೆಸರು : ಲೀಲಾವತಿ ಶಂಕರ ನಾಯ್ಕ**
**ಊರು : ಬಿದ್ರಮನೆ, ಕಾಯ್ಕಿಣಿ**
**ತಾಲೂಕ: ಭಟ್ಕಳ**
**ಜಿಲ್ಲೆ : ಉತ್ತರ ಕನ್ನಡ**
**ವಯಸ್ಸು : 34 ವಿದ್ಯಾಭ್ಯಾಸ: ಲಿಂಗ : ಹೆಣ್ಣು**
**ದೂ.ಸಂ: 9972383577**

## ವಿಶೇಷ ಸಾಧನೆಗಳು :

- ತೋಟಗಾರಿಕೆ, ಕೃಷಿ ಹಾಗೂ ಹೈನುಗಾರಿಕೆಯಿಂದ ಅಧಿಕ ಇಳುವರಿ ಹಾಗೂ ಲಾಭವನ್ನು ಗಳಿಸುತ್ತಿರುತ್ತಾರೆ.
- ಪ್ರಮುಖವಾಗಿ ಭತ್ತವನ್ನು ಬೆಳೆಯುತ್ತಿದ್ದು, ಉಳಿಕೆ ತೇವಾಂಶದಲ್ಲಿ ಅಲಸಂದೆ ಹಾಗೂ ಶೇಂಗಾ ಬೆಳೆಗಳನ್ನು ಬೆಳಯುತ್ತಾರೆ.
- ತೋಟಗಾರಿಕೆ ಬೆಳೆಗಳಲ್ಲಿ ಪ್ರಮುಖವಾಗಿ ಅಡಿಕೆ, ಕಾಳುಮೆಣಸು, ತೆಂಗು ಹಾಗೂ ಬಾಳೆ ಬೆಳೆಯುತ್ತಾರೆ.
- ಸಾಗವಾನಿ ಮರಗಳನ್ನು ಬದುಗಳ ಮೇಲೆ ಬೆಳೆಯುತ್ತಾರೆ.
- ಕೃಷಿಗಾಗಿ ಹನಿ ನೀರಾವರಿ, ಸಿಂಚನ ಹಾಗೂ ಬಸಿ ಕಾಲುವೆಗಳನ್ನು ಉಪಯೋಗಿಸಿಕೊಂಡು ಸಮೃದ್ಧ ನೀರಿನ ನಿರ್ವಹಣೆ ಮಾಡುತ್ತಿದ್ದಾರೆ.
- ಮಣ್ಣಿನ ಫಲವತ್ತತೆಯನ್ನು ಹಾಗೂ ಉತ್ಪಾದನೆಯನ್ನು ಹೆಚ್ಚಿಸಲು ಕೊಟ್ಟಿಗೆ ಗೊಬ್ಬರ ಎರೆಹುಳು ಗೊಬ್ಬರ ಹಾಗೂ ಜೈವಿಕ ಗೊಬ್ಬರಗಳ ಬಳಸುತ್ತಿದ್ದಾರೆ. ಹಾಗೂ ರೋಗಗಳ ನಿರ್ವಹಣೆಗಾಗಿ ಜೈವಿಕ ಪೀಡೆನಾಶಕಗಳನ್ನು ಉಪಯೋಗಿಸಿ ಪರಿಸರ ಸ್ನೇಹಿ ಹಾಗೂ ಆರೋಗ್ಯವಂತ ಕೃಷಿಯಲ್ಲಿ ತೊಡಗಿದ್ದಾರೆ.
- ಕೂಲಿ ಕಾರ್ಮಿಕರ ಸಮಸ್ಯೆ ಬಗೆಹರಿಸಲು ಯಾಂತ್ರಗಳ ಮೊರೆ ಹೋಗಿದ್ದಾರೆ.
- 2 ಸ್ವದೇಶಿ ಹಾಗೂ 3 ಮಿಶ್ರ ತಳಿ ಹಸುಗಳನ್ನು ಹೊಂದಿದ್ದು ಹೈನುಗಾರಿಕೆಲ್ಲಿ ಉತ್ತಮ ಆದಾಯ ಗಳಿಸುತ್ತಿದ್ದಾರೆ.

# ಸಮಗ್ರ ಕೃಷಿ ಪದ್ದತಿ ಅಳವಡಿಸಿದ ಕೃಷಿ ಮಹಿಳೆ ಶ್ರೀ ದೇವಿ ಗೋಪಾಲಕೃಷ್ಣ ಗಾಂವ್ಕರ್

## ತಾಲೂಕು : ಯಲ್ಲಾಪುರ



**ಹೆಸರು : ಶ್ರೀದೇವಿ ಗೋಪಾಲಕೃಷ್ಣ ಗಾಂವ್ಕರ್**
**ಊರು : ಕಂಡ್ರನ್‌ಕೊಪ್ಪ**
**ತಾಲೂಕ: ಯಲ್ಲಾಪುರ**
**ಜಿಲ್ಲೆ : ಉತ್ತರ ಕನ್ನಡ**
**ವಯಸ್ಸು: 28**
**ಲಿಂಗ: ಹೆಣ್ಣು**
**ದೂ.ಸಂ: 9902893554**

## ವಿಶೇಷ ಸಾಧನೆಗಳು :

- ಇವರು ಒಟ್ಟು 2.12 ಎಕರೆ ಕ್ಷೇತ್ರವನ್ನು ಹೊಂದಿದ್ದು ಸಮಗ್ರ ಕೃಷಿ ಪದ್ದತಿಯನ್ನು ಅಳವಡಿಸಿದ್ದಾರೆ.
- ಇವರು ಕೃಷಿ ಬೆಳೆಗಳಾದ ಭತ್ತ, ಕಬ್ಬು, ಹಾಗೂ ತೋಟಗಾರಿಕೆ ಬೆಳೆಗಳಾದ ಅಡಿಕೆ, ಬಾಳೆ, ಕಾಳುಮೆಣಸು ಬೆಳೆಯುತ್ತಿದ್ದಾರೆ.
- ಜೇನು ಸಾಕಾಣಿಕೆ ಹಾಗೂ ಹೈನುಗಾರಿಕೆಯಲ್ಲೂ ಯಶಸ್ಸನ್ನು ಕಂಡಿದ್ದಾರೆ.
- ಕಬ್ಬಿನ ಗಾಣ ಅಳವಡಿಸಿ ಬೆಲ್ಲ ತಯಾರಿ ಮಾಡಿ ಮಾರಾಟ ಮಾಡುವುದರಿಂದ ಹೆಚ್ಚಿನ ಆದಾಯಗಳಿಸುತ್ತಿದ್ದಾರೆ. ಅಲ್ಲದೇ ಬಾಳೆ ಹಲಸಿನ ಹಪ್ಪಳ ಹಾಗೂ ಚೀಪ್ಸ್ ತಯಾರು ಮಾಡಿ ಮಾರಾಟ ಮಾಡುತ್ತಾರೆ.
- ಇವರ ಪ್ರಮುಖ ಬೆಳೆಗಳು : ಅಡಿಕೆ, ಬಾಳೆ, ಕಬ್ಬು, ಮಾವು, ಚಿಕ್ಕು ಸೋಯಾಅವರೆ, ಭತ್ತ ಇತ್ಯಾದಿ.





## ಅಂಕೋಲಾದ ಯುವ ಕೃಷಿ ಮಹಿಳೆ ಮಂಗಲಾ ಶಿವಾನಂದ ಗೌಡ

### ತಾಲೂಕು : ಅಂಕೋಲಾ



ಹೆಸರು : ಮಂಗಲಾ ಶಿವಾನಂದ ಗೌಡ
ಊರು : ಬಳಲೆ, ತಳಗದ್ದೆ
ತಾಲೂಕ: ಅಂಕೋಲಾ
ಜಿಲ್ಲೆ : ಉತ್ತರ ಕನ್ನಡ
ವಯಸ್ಸು: 33 ವಿದ್ಯಾಭ್ಯಾಸ : 7ನೇ ತರಗತಿ
ಲಿಂಗ: ಹೆಣ್ಣು
ದೂ.ಸಂ: 9591098724

## ವಿಶೇಷ ಸಾಧನೆಗಳು :

- 2.5 ಎಕರೆ ಬೇಸಾಯ ಕ್ಷೇತ್ರವನ್ನು ಹೊಂದಿದ್ದು ಭತ್ತ, ಉದ್ದು, ಶೇಂಗಾ, ಅಡಿಕೆ, ಕಾಳುಮೆಣಸು, ದ್ರಾಕ್ಷಿ ಹಾಗೂ ಬೆಂಡೆಕಾಯಿ ಬೆಳೆಗಳನ್ನು ಬೆಳೆದು ಉತ್ತಮ ಆದಾಯ ಗಳಿಸುತ್ತಿದ್ದಾರೆ.
- ಮಾವು ಹಾಗೂ ಗೇರು ಬೆಳೆಗಳನ್ನು ಬೆಳೆದಿದ್ದಾರೆ.
- 20 ಗುಂಟೆ ಕ್ಷೇತ್ರದಲ್ಲಿ ಮಲ್ಲಿಗೆ ಕೃಷಿಯಲ್ಲಿ ತೊಡಗಿದ್ದಾರೆ.
- 25 ನಾಟಿ ಕೋಳಿಗಳನ್ನು ಹೊಂದಿದ್ದು ನಾಟಿ ಕೋಳಿ ಸಾಕಾಣಿಕೆಯಿಂದ ಆದಾಯ ಪಡೆಯುತ್ತಿದ್ದಾರೆ.
- ಕಾಂಪೋಸ್ಟ್, ಎರೆಹುಳು ಗೊಬ್ಬರ, ಗೋಬರ್ ಗ್ಯಾಸ್ ಹಾಗೂ ಬಯೊಡೈಜಸ್ಟ್‌ರ್ ಸ್ವತಹ: ತಯಾರಿಸಿ, ಜೈವಿಕ ಗೊಬ್ಬರಗಳಾದ ರೈಜೋಬಿಯಂ ನಂತಹ ಜೀವಾಣುಗಳ ಜೊತೆ ಬೆರೆಸಿ ಪರಿಸರ ಸ್ನೇಹಿ ಹಾಗೂ ಆರೋಗ್ಯವಂತ ಕೃಷಿಯಲ್ಲಿ ತೊಡಗಿದ್ದಾರೆ.
- ತಮ್ಮ ಕೃಷಿ ಕಾಯಕದಿಂದ 7–8 ಲಕ್ಷದ ವರೆಗೆ ಆದಾಯ ಪಡೆಯುತ್ತಿದ್ದಾರೆ.